ಶ್ರೀ ಬಿ. ಶಿವರಾಮ್ : ನನ್ನ ಮೂರು ಪ್ರಶ್ನೆಗೆ ಉತ್ತರ ಬರಲಿಲ್ಲ. ಹೋದ ಸಾರಿ ತಾವು ಏನು ಡೆಫರ್ ಮಾಡಿದಿರಿ, ಕ್ಯಾರೀಡ್ ಓವರ್ ಮಾಡಿದ್ದೀರಿ. ಅದಕ್ಕೂ ಕೂಡ ಉತ್ತರ ಬಂದಿಲ್ಲ. ಹೀಗಾದರೆ ನಾವು ಈ ಸದನದಲ್ಲಿ ಏತಕ್ಕೆ ಪ್ರಶ್ನೆ ಕೇಳ ಬೇಕೆಂಬ ಭಾವನೆ ನಮಗೆ ಬಂದಿದೆ ಪ್ರೊಫೆಸರ್‌ರವರು ಹೇಳಿದಂತೆ ಲಕ್ಷ ಕೋಟಿ ರೂಪಾಯಿಗಳನ್ನು ರೋಜ್‌ಗಾರ್ ಯೋಜನೆಯಲ್ಲಿ ಖರ್ಚು ಮಾಡಿಲ್ಲ. ಳಂಜ ತಿಂಗಳಿನಿಂದ ದುದ್ದಾ ಮೊಲಗೋಡು ಮಂಡಲ ಪಂಚಾಯತಿಯಲ್ಲಿ ಮೀಟಿಂಗ ಕರೆದಿಲ್ಲ. ಇವತ್ತು ಮಂತ್ರಿಗಳು ಇದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುವುದಾದರೆ ಅದು ಸರಿಯಲ್ಲ. ರೋಜಗಾರ್ ಯೋಜನೆಯಲ್ಲಿ ಹಣವನ್ನು ಖರ್ಚು ಮಾಡುತ್ತಿಲ್ಲ ಕಚೇರಿ ಬಾಗಿಲು ಮುಚ್ಚಿದೆ ಅಲ್ಲಿರತಕ್ಕಂತಹ ಅಧಿಕಾರಿಗಳಿಗೆ ಸಂಬಳ ಕೊಡುತ್ತಿಲ್ಲ ಇದನ್ನು ಸದನದಲ್ಲಿ ಗಮನಕ್ಕೆ ತಂದು ವಿವರವನ್ನು ನಾವು ತಿಳಿದುಕೊಳ್ಳದೆ ಹೇಗೆ ನಾವು ಇಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ ? ೩೦ ದಿವಸಕ್ಕಿಂತ ಮೊದಲೇ ನಾನು ಪ್ರಶ್ನೆ ಹಾಕಿದ್ದೇನೆ. ಇನ್ನೂ ಉತ್ತರ ಬಂದಿಲ್ಲವೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಮಂಡಲ ಪಂಚಾಯತಿಯಲ್ಲಿ ಯಾವ ರೀತಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದು ನಾವು ತಿಳಿದುಕೊಳ್ಳಬಹುದು.

ಅಧ್ಯಕ್ಷರು : ಇದರಲ್ಲಿ ಏನು ತೊಂದರೆ ಇದೆ ?

ಶ್ರೀ ಬಿ. ಶಿವರಾಮ್ : ಇದು ಬಹಳ ಸಿಂಪಲ್ ಪ್ರಶ್ನೆ. ಇದರಲ್ಲಿ ಹೆಚ್ಚು ಮಾಹಿತಿ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರ ಕಳವಳ ನನಗೆ ಅರಿವಾಗಿದೆ ಈಗ ಪ್ರಶ್ನೆಗೆ ಉತ್ತರ ಒಂದಿಲ್ಲ ಉತ್ತರ ಬಾರದೇ ಇರುವುದರಿಂದ ತಮಗೆ ಉತ್ತರ ಒದಗಿಸಿಲ್ಲ. ಇದಕ್ಕೆ ಕಾರಣವನ್ನು ಹೇಳುವುದಕ್ಕೆ ಹೋದರೆ ತಮಗೆ ತೃಪ್ತಿಯಾಗುವುದಿಲ್ಲ. ಯಾವ್ಯಾವ ಅಧಿಕಾರಿಗಳು ಕರ್ತವ್ಯ ಲೋಪ ಮಾಡುತ್ತಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ನಾನು ಇದೇ ಮೊದಲನೆಯ ಸಲ ಉತ್ತರ ಬಂದಿಲ್ಲವೆಂದು ಹೇಳಿರುವುದು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

Mr. Speaker : I will hold it over

ಈ ಅಧಿವೇಶನದಲ್ಲಿ ನಿಮ್ಮ ಪ್ರಶ್ನೆ ಬರುವ ರೀತಿಯಲ್ಲಿ ಏರ್ಪಾಡು ಮಾಡೋಣ

ವಿಷಯ : ನೆಲಮಂಗಲ ಕ್ಷೇತ್ರದಲ್ಲಿರುವ ಪಶುವೈದ್ಯ ಶಾಲೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೦೬ (೬೮೧)

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಎಷ್ಟು ಪಶುವೈದ್ಯ ಶಾಲೆಗಳಿವೆ ಮತ್ತು ಯಾವ ಯಾವ ಜಾಗದಲ್ಲಿ ಇರುತ್ತವೆ ?

ಆ) ಇನ್ನೂ ಎಷ್ಟು ಪಶುವೈದ್ಯಶಾಲೆಗಳ ಅವಶ್ಯಕತೆ ಇದೆ ಹಾಗೂ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನೆ ಸಚಿವರು) : ಅ) ೩ ಪಶು ವೈದ್ಯ ಶಾಲೆಗಳು ೫ ಗ್ರಾಮೀಣ ಪಶುವೈದ್ಯ ಶಾಲೆಗಳು ಮತ್ತು ೩ ಕೃತಕ ಗರ್ಭಧಾರಣಾ ಉಪ ಕೇಂದ್ರಗಳು, ಒಟ್ಟು ೧೧ ಪಶು ವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಪಶು ವೈದ್ಯ ಶಾಲೆಗಳು : ೧) ನೆಲಮಂಗಲ ೨) ಗುಡೇ ಮಾರನಹಳ್ಳಿ ಮಾಗಡಿ ತಾಲ್ಲೂಕು. ೩) ಸೊಂಡೇಕೊಪ್ಪ, ಬೆಂಗಳೂರು ಉತ್ತರ ತಾಲ್ಲೂಕು.

ಗ್ರಾಮೀಣ ಪಶು ವೈದ್ಯ ಶಾಲೆಗಳು :

೧) ಗಾಂಧಿ ಗ್ರಾಮ ನೆಲಮಂಗಲ ತಾಲ್ಲೂಕು
೨) ಮಾಕಳಿ, ಬೆಂಗಳೂರು ಉತ್ತರ ತಾಲ್ಲೂಕು
೩) ಚನ್ನಾದೇವಿ ಅಗ್ರಹಾರ, ದೊಡ್ಡಬಳ್ಳಾಪುರ ತಾಲ್ಲೂಕು
೪) ವಡಗೆರೆ ದೊಡ್ಡಬಳ್ಳಾಪುರ ತಾಲ್ಲೂಕು
೫) ಅಂಬಲಗೆರೆ, ದೊಡ್ಡಬಳ್ಳಾಪುರ ತಾಲ್ಲೂಕು

ಕೃತಕ ಗರ್ಭಧಾರಣಾ ಉಪ ಕೇಂದ್ರಗಳು :

೧) ಗೊಲ್ಲಹಳ್ಳಿ ನೆಲಮಂಗಲ ತಾಲ್ಲೂಕು
೨) ದಾಸನಪುರ, ಬೆಂಗಳೂರು ಉತ್ತರ ತಾಲ್ಲೂಕು
೩) ಮಾಚೋಹಳ್ಳಿ, ಬೆಂಗಳೂರು ಉತ್ತರ ತಾಲ್ಲೂಕು

ಆ) ಇನ್ನೂ ಆರು ಪಶು ವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇದೆ. ಪ್ರಸಕ್ತ ಸಾಲಿನಲ್ಲಿ ಈ ಮತ ಕ್ಷೇತ್ರದಲ್ಲಿ ಹೊಸದಾಗಿ ಮೂರು ಗ್ರಾಮೀಣ ಪಶು ಚಿಕಿತ್ಸಾಲಯಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆಂಜನಮೂರ್ತಿ : ಸನ್ಮಾನ್ಯ ಸಭಾಧ್ಯಕ್ಷರೇ ನನ್ನ ಕೊನೆಯ ಪ್ರಶ್ನೆಯಲ್ಲಿ 'ನನ್ನ ಮತಕ್ಷೇತ್ರದಲ್ಲಿ ಇನ್ನೂ ಎಷ್ಟು ಪಶುವೈದ್ಯ ಶಾಲೆಗಳ ಅವಶ್ಯಕತೆ ಇದೆ ಹಾಗೂ ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದೆ ?' ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು 'ಇನ್ನೂ ಆರು ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇದೆ. ಪ್ರಸಕ್ತ ಸಾಲಿನಲ್ಲಿ ಈ ಮತಕ್ಷೇತ್ರದಲ್ಲಿ ಹೊಸದಾಗಿ ಮೂರು ಗ್ರಾಮೀಣ ಪಶು ಚಿಕಿತ್ಸಾಲಯಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ' ಎಂದು ಹೇಳುತ್ತಾರೆ. ನಾನು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇನೆ. ಸುಮಾರಾಗಿ ನನ್ನ ಮತಕ್ಷೇತ್ರದಲ್ಲಿ ರೈತಾಪಿ ಜನ ಹೆಚ್ಚು ಇರುವುದರಿಂದ ಇನ್ನೂ ಹತ್ತು ಪಶು

ವೈದ್ಯ ಶಾಲೆಗಳು ಬೇಕು ಎಂದು ಕೇಳಿದ್ದೇನೆ. ಅವರು ಇಲ್ಲಿ ಮೂರು ಕಡೆ ಪಶು ಚಿಕಿತ್ಸಾಲಯಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಇವಗಳು ಯಾವ್ಯಾವ ಭಾಗದಲ್ಲಿ ಇದೆಯೆಂದು ಹೇಳಿಲ್ಲ. ದಯಮಾಡಿ ಯಾವ್ಯಾವ ಗ್ರಾಮಗಳಲ್ಲಿ ಇವುಗಳು ಆಗುತ್ತವೆ ಎಂದು ನಾನು ತಿಳಿಯಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಈ ತಾಲ್ಲೂಕಿನಲ್ಲಿ ಆರು ಪಶುವೈದ್ಯಶಾಲೆಗಳ ಅವಶ್ಯಕತೆ ಇದೆಯೆಂದು ಹೇಳಿದ್ದೇನೆ. ಜಿಲ್ಲಾ ಪರಿಷತ್ತಿನವರು ಒಟ್ಟು ೨೪ ಹೊಸ ಗ್ರಾಮೀಣ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಉದ್ದೇಶಿಸಿದ್ದಾರೆ. ಶ್ರೀನಿವಾಸಪುರ –ನೆಲಮಂಗಲ ತಾಲ್ಲೂಕಿನಲ್ಲಿ, ಮೊಟಗಾನಹಳ್ಳಿ, ಈಸೂರು–ದೊಡ್ಡಬಳ್ಳಾಪುರ ತಾಲ್ಲೂಕು–ಇವುಗಳನ್ನು ತಕ್ಷಣ ಮಾಡಬೇಕೆಂದು ಅವರು ನಮಗೆ ತಿಳಿಸಿದ್ದಾರೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಇನ್ನೂ ಆರು ಇದೆ. ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಅಂಜನಮೂರ್ತಿ : ಇನ್ನೂ ಹತ್ತು ಬೇಕು ಎಂದು ನಾನು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಹತ್ತು ಬೇಕೇ ಬೇಕು ಎಂದು ಹೇಳಿದ್ದೀರಿ. ಪರಿಬಿಡಿ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಪಶು ವೈದ್ಯ ಶಾಲೆಗಳ ಬಗ್ಗೆ ಒಂದೇ ಒಂದು ಮಾತು ಶ್ರೀ ಬಸವರಾಜ್ ಮತ್ತು ಅಂಜನಮೂರ್ತಿ ಅವರುಗಳಿಗೆ ಉತ್ತರ ಕೊಡುತ್ತಾ ಮಾನ್ಯ ಸಚಿವರು ಮುಂಬರುವ ಸಾಲಿನಲ್ಲಿ ಪ್ರತಿ ಮಂಡಲಕ್ಕೆ ಒಂದು ಪಶುವೈದ್ಯ ಚಿಕಿತ್ಸಾಲಯ ಸ್ಥಾಪಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ಎಂದು ಕೇಳಿರುವುದಕ್ಕೆ ಪರಿಶೀಲಿಸಲಾಗುವುದು' ಎಂದು ಹೇಳಿದ್ದಾರೆ ನಿಮಗೆ ಅಷ್ಟು ಸುಲಭವಾಗಿ ಪರಿಶೀಲಿಸುವುದಕ್ಕೆ ಆಗುತ್ತಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಎಷ್ಟು ಜನಸಂಖ್ಯೆ ಇದೆ, ಅಷ್ಟೇ ಪಶುಸಂಖ್ಯೆ ಕೂಡ ಇದೆ including sheep and pigs.

Mr. Speaker : Excluding Birds
(LAUGHTER)

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಪಕ್ಷಿಗಳು ಈ ವ್ಯಾಪ್ತಿಗೆ ಬಂದರೆ ಪರಿಶೀಲಿಸುವುದಕ್ಕೇ ಆಗುವುದಿಲ್ಲ. ಇಷ್ಟು ಪರಿಶೀಲಿಸಿದರೆ ಸಾಕಾಗಿದೆ. ಮಾನ್ಯ ಕೃಷಿ ಸಚಿವರು ಕೂಡ ಇಲ್ಲಿಯೇ ಇರುವುದರಿಂದ ಅವರ ಗಮನಕ್ಕೂ ತರೋಣ ಎಂದು ನಾನು ಇದನ್ನು ಹೇಳುತ್ತಿದ್ದೇನೆ. ಎಷ್ಟು ಜನಸಂಖ್ಯೆ ಇದೆಯೋ, ಅಷ್ಟೇ ಪಶುಸಂಖ್ಯೆ ಕೂಡ ಇದೆ. ಹಂದಿ, ಕುರಿ ಮತ್ತು ಮೇಕೆ ಸೇರಿ. ಆದರೆ ನಮ್ಮಲ್ಲಿ ವೆಟರ್ನರಿ ಕಾಲೇಜ್‌ನ ಇನ್‌ಟೇಕ್ ಇರುವುದು ಇಡೀ ರಾಜ್ಯಕ್ಕೆ ಕೇವಲ ನೂರು. ಬೆಂಗಳೂರಿ

ನಲ್ಲಿ ೬೦ ಮತ್ತು ಬೀದರ್‌ನಲ್ಲಿ ೪೦. ಮೆಡಿಕಲ್ ಕಾಲೇಜ್‌ನ ಇನ್‌ಟೇಕ್ ಎಷ್ಟಿದೆ ಎಂದು ತಮಗೆ ಗೊತ್ತಿದೆ ತಾವು ಪಶುಗಳನ್ನು ಏಕೆ ಇಷ್ಟು ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಇದು ಕೇವಲ ಶ್ರೀ ಬಸವರಾಜ ಮತ್ತು ಶ್ರೀ ಅಂಜನಮೂರ್ತಿಯವರ ಸಮಸ್ಯೆ ಅಲ್ಲ. ಇದು ನಮ್ಮ ೧೭೫ ತಾಲ್ಲೂಕುಗಳ ಸಮಸ್ಯೆ ಇದೆ. ವೆಟರ್ನರಿ ಕಾಲೇಜಿನ ಇನ್‌ಟೇಕ್‌ನ್ನು ಐದುನೂರು ಪರ್ಸೆಂಟ್ ಆದರೂ ಜಾಸ್ತಿ ಮಾಡಬೇಕು. ಕರ್ನಾಟಕ ರಾಜ್ಯಕ್ಕೆ ನೂರು ಇರುವುದು ಏನೂ ಸಾಲದು. At least it should be increased to 500.

ಅಧ್ಯಕ್ಷರು : ಈ ಪ್ರಶ್ನೆ ಇದರಲ್ಲಿ ಉದ್ಭವ ಆಗುವುದಿಲ್ಲ. ನೀವು ಬೇರೆ ಪ್ರಶ್ನೆಯನ್ನು ಕೇಳಬೇಕಾಗುತ್ತದೆ

ವಿಷಯ : ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೦೭ (೬೮೭)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತವನ್ನು ತಡೆಯಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ರಾಜ್ಯದಲ್ಲಿ ಎಷ್ಟು ಎಕರೆಗಳಲ್ಲಿ ತೆಂಗಿನ ತೋಟಗಳಿವೆ ? (ಜಿಲ್ಲಾವಾರು ಅಂಕಿಗಳನ್ನು ಒದಗಿಸುವುದು ?)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಣ್ಣೆ ಕೊಬ್ಬರಿಗೆ ಈಗಾಗಲೇ ಭಾರತ ಸರಕಾರವು ಕ್ವಿಂಟಾಲ್ ಒಂದಕ್ಕೆ ೧೬೦೦ ರೂಪಾಯಿಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯದ ಸಹಕಾರಿ ಮಾರುಕಟ್ಟೆ ಮಂಡಳಿ ಮೂಲಕ ರಾಷ್ಟ್ರೀಯ ಕೃಷಿ ಉತ್ಪಾದನಾ ಪರಿವಾಟ ಮಹಾಮಂಡಳಿಯು ಖರೀದಿಸುತ್ತಿದೆ ಇದೇ ರೀತಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ಒಣ ಕೊಬ್ಬರಿಗೂ ಸಹ ಕ್ವಿಂಟಾಲ್ ಒಂದಕ್ಕೆ ೨೫೦೦ ರೂ. ಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ಹಾಗೂ ಈ ವಿಷಯದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ಆ) ರಾಜ್ಯದಲ್ಲಿ ಒಟ್ಟು ೩೪೪೪೦೦ ಹೆಕ್ಟೇರುಗಳಲ್ಲಿ ತೆಂಗನ್ನು ಬೆಳೆಸಲಾಗುತ್ತಿದೆ. ಜಿಲ್ಲಾವಾರು ಅಂಕಿ ಅಂಶಗಳು ಈ ಕೆಳಕಂಡಂತಿವೆ.